ಆರೋಗ್ಯ ಮತ್ತು ಕುಟುಂಬ ಇಲಾಖೆಯಲ್ಲಿ ಎ ಮತ್ತು ಬಿ ವರ್ಗದ ಹುದ್ದೆಗಳ ಮಂಜುರಾತಿ

೨೯೦ (ಳಜಿಒ) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿರುವ ಒಟ್ಟು ಎ ಮತ್ತು ಬಿ ವರ್ಗದ ಹುದ್ದೆಗಳು ಎಷ್ಟು ?

ಆ) ಅವುಗಳಲ್ಲಿ ಎಷ್ಟು ಹುದ್ದೆಗಳನ್ನು ತುಂಬಲಾಗಿದೆ ಮತ್ತು ಎಷ್ಟು ಹುದ್ದೆಗಳು ಖಾಲಿ ಉಳಿದಿವೆ ?

ಇ) ಆ ಹುದ್ದೆಗಳನ್ನು ತುಂಬುವಾಗ ನಿಗದಿಪಡಿಸಿದ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ? (ವಿವರಗಳನ್ನು ನೀಡುವುದು)

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ವರ್ಗ–ಎ ೪೬೦
ವರ್ಗ–ಬಿ ೩೩೪

ಆ)

	ತುಂಬಲಾಗಿರುವುದು	ಖಾಲಿ ಇರುವುದು
ವರ್ಗ–ಎ	೩೯೬	೬೯
ವರ್ಗ–ಬಿ	೧೧೩	೨೨೧
ಒಟ್ಟು	೪೦೯೯	೯೧೯

ಇ) ಅನುಸರಿಸಲಾಗಿದೆ. ಈ ಹುದ್ದೆಗಳಲ್ಲಿ ಹಲವು ನೇರ ನೇಮಕಾತಿಯಿಂದ ಮತ್ತು ಇನ್ನು ಕೆಲವು ಪದೋನ್ನತಿಯಿಂದ ತುಂಬುವಂತಹವು ಆಗಿರುತ್ತದೆ. ನೇರ ನೇಮಕಾತಿ ಮತ್ತು ಪದೋನ್ನತಿಯ ಕ್ರಿಯೆಗಳಲ್ಲಿ ವಿೂಸಲಾತಿಯ ನಿಗದಿತ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆ.

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿರುವ ಎ ವರ್ಗದ ಹುದ್ದೆಗಳೆಷ್ಟು ಎಂದು ಕೇಳಿದ್ದೆ ಅದಕ್ಕೆ ೪೬೦ ಇದೆ ಎಂದರು, ಬಿ ವರ್ಗದ ಹುದ್ದೆ ೩೩೪ ಎಂದು ಹೇಳಿದರು. ಖಾಲಿ ಇರುವ ಹುದ್ದೆಗಳು ಎ ವರ್ಗ ೬೯, ಬಿ ವರ್ಗ ೨೨೧ ಇದೆ. ಇವುಗಳನ್ನು ಮಾಡಬೇಕಾದರೆ ಸರ್ಕಾರ ನಿರ್ಬಂಧ ಹಾಕಿತ್ತು, ರದ್ದುಮಾಡಿದ್ದು ಈ ಹುದ್ದೆಗಳನ್ನು ದೇರವಾಗಿ ನೇಮಕಾತಿ ಮಾಡಿಕೊಳ್ಳುತ್ತಾರಾ ಇಲ್ಲವೆ ಉದ್ಯೋಗ ವಿನಿಮಯ ಕೇಂದ್ರದಿಂದ ಮಾಡಿಕೊಳ್ಳುತ್ತಾರಾ ? ಎಷ್ಟು ದಿವಸದಲ್ಲಿ ಈ ಹುದ್ದೆಗಳನ್ನು ಭರ್ತಿಮಾಡುತ್ತಾರೆ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು.—ಮಾನ್ಯ ಅಧ್ಯಕ್ಷರೇ ಈಗಾಗಲೇ ವೈದ್ಯರನ್ನು ಭರ್ತಿ ಮಾಡುವ ಸಲುವಾಗಿ ವೈದ್ಯರ ಕೊರತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಉದ್ಯೋಗ ವಿನಿಮಯ ಕಚೇರಿಯಿಂದ ನೇಮಕ ಮಾಡಿಕೊಳ್ಳುವುದಕ್ಕೆ ಹೋಗದೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೆ ೭೭೫ ವೈದ್ಯರನ್ನು ನೇಮಕ ಮಾಡಿಕೊಂಡಿದ್ದು ಇನ್ನು ಸ್ವಲ್ಪ ವೈದ್ಯರನ್ನು ನೇಮಕ ಮಾಡಿಕೊಳ್ಳುವ ಕಾರ್ಯ ನಡೆಯುತ್ತಿದೆ. ಅದೇ ರೀತಿ ಬಿ ವರ್ಗದ ನಾಕರರನ್ನು ನೇರವಾಗಿ ಈ ಇಲಾಖೆ ಮುಖಾಂತರ ನೇಮಕ ಮಾಡಿಕೊಳ್ಳುವಂತಹ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಕೆ. ಲಕ್ಕಣ್ಣ.—ಎಷ್ಟು ದಿವಸದಲ್ಲಿ ಮಾಡುತ್ತೀರಿ ?

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು.—ಒಂದು ತಿಂಗಳಲ್ಲಿ ಎಲ್ಲಾ ಕಾರ್ಯಗಳನ್ನು ಮುಗಿಸುತ್ತೇವೆ.